ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE 6/7/2020

**ಕೊರೋನಾ ಚಿಕಿತ್ಸೆ** ಅಂ.ರಾ. ಎಕ್ಸಿಬಿಷನ್ ಕೇಂದ್ರದಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪನೆ | ದಿಲ್ಲಿ ಕೇಂದ್ರಕ್ಕಿಂತ ದೊಡ್ಡದು | ಸೋಂಕು ಲಕ್ಷಣ ಇಲ್ಲದವರಿಗೆ ಚಿಕಿತ್ಸೆ

# ಬೆಂಗಳೂರಲ್ಲಿ 10100 ಬೆಡ್‌ನ ಕೋವಿಡ್ ಕೇಂದ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನವದೆಹಲಿಯ ಛತರ್‌ಪುರದ ರಾಧಾಸ್ವಾಮಿ ಸತ್ಸಂಗ್ ಬಿಯಾಸ್‌ನಲ್ಲಿ ಭಾನುವಾರ ಉದ್ಘಾಟಿಸಲಾದ 10 ಸಾವಿರ ಹಾಸಿಗೆ ಸಾಮರ್ಥ್ಯದ 'ಸರ್ದಾರ್ ಪಟೇಲ್ ಕೋವಿಡ್ ಆರೈಕೆ ಕೇಂದ್ರ'ದ ಮಾದರಿಯಲ್ಲಿ ಬೆಂಗಳೂರಿನ ಹೊರವಲಯದ ತುಮಕೂರು ರಸ್ತೆಯ ಬೆಂಗಳೂರು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನಾ ಕೇಂದ್ರದಲ್ಲಿ (ಬಿಐಇಸಿ) ಸಿದ್ಧಪಡಿಸಲಾಗುತ್ತಿರುವ ಕೋವಿಡ್ ಆರೈಕೆ ಕೇಂದ್ರದ ಹಾಸಿಗೆ ಸಾಮರ್ಥ್ಯವನ್ನು ಏಳು ಸಾವಿರದಿಂದ 10,100ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಭಾನುವಾರ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಸ್.ಆರ್.ವಿಶ್ವನಾಥ್ ಹಾಗೂ ಬಿಬಿಎಂಪಿ ಆಯುಕ್ತ ಬಿ.ಎಚ್.ಅನಿಲ್‌ಕುಮಾರ್ ಅವರು ಬೆಂಗಳೂರು ಬಿಐಇಸಿಗೆ ಭೇಟಿ ನೀಡಿ ಕೊರೋನಾ ಸೋಂಕಿತರ ಆರೈಕೆ ಕೇಂದ್ರದ ಸಿದ್ಧತೆಯನ್ನು ಪರಿಶೀಲಿಸಿದರು.

ಈ ವೇಳೆ ಎಸ್.ಆರ್.ವಿಶ್ವನಾಥ್, ಬಿಬಿಎಂಪಿ ಆಯುಕ್ತರು ಮತ್ತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಬಿಐಇಸಿಯ ಹಾಸಿಗೆಗಳ ಸಾಮರ್ಥ್ಯವನ್ನು ಏಳರಿಂದ 10 ಸಾವಿರಕ್ಕೆ ಹೆಚ್ಚಿಸಲು ನಿರ್ಧರಿಸಿದ್ದಾರೆ. ನಗರದಲ್ಲಿ ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಬಿಐಇಸಿಯಲ್ಲಿ ಹಾಸಿಗೆ ಸಾಮರ್ಥ್ಯವನ್ನು 10 ಸಾವಿರಕ್ಕೆ ಹೆಚ್ಚಿಸಲು ಹಾಸಿಗೆಗಳ ನಡುವೆ ಇರುವ ಎರಡು ಮೀಟರ್ ಅಂತರವನ್ನು ಒಂದು ಮೀಟರ್‌ಗೆ ಕಡಿಮೆ ಮಾಡಲು ತೀರ್ಮಾನಿಸಲಾಗಿದೆ.

ಆಸ್ಪತ್ರೆಯ ವಾರ್ಡ್ ರೀತಿ ಕ್ಯಾಬಿನ್ ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ಕ್ಯಾಬಿನ್‌ನಲ್ಲಿ 40ರಿಂದ 42 ಮಂದಿಗೆ ಚಿಕಿತ್ಸೆ ನೀಡಲಾಗುವುದು.

ಈ ಕುರಿತು ಪ್ರತಿಕ್ರಿಯೆ ನೀಡಿದ ಬಿಬಿಎಂಪಿ ಆಯುಕ್ತ ಬಿ.ಎಚ್. ಅನಿಲ್‌ಕುಮಾರ್ ಅವರು, ದೆಹಲಿಯಲ್ಲಿ ಭಾನುವಾರ ಉದ್ಘಾಟನೆಗೊಂಡ 'ಕೋವಿಡ್ ಆರೈಕೆ'ದಲ್ಲಿ 10 ಸಾವಿರ ಹಾಸಿಗೆ ವ್ಯವಸ್ಥೆ ಇದೆ. ಬಿಐಇಸಿಯಲ್ಲಿ ಇದಕ್ಕಿಂತ 100 ಹೆಚ್ಚು ಹಾಸಿಗೆ ವ್ಯವಸ್ಥೆ ಆಗಲಿದೆ. ಹಾಗಾಗಿ, ಬಿಐಇಸಿಯ ಕೇಂದ್ರ ದಿಲ್ಲಿ ಕೇಂದ್ರಕ್ಕಿಂತ ದೊಡ್ಡ ಆರೈಕೆ ಕೇಂದ್ರವಾಗಲಿದೆ ಎಂದು ತಿಳಿಸಿದರು. ಬಿಐಇಸಿಯಲ್ಲಿ ಸೋಂಕಿನ ಲಕ್ಷಣ ಇಲ್ಲದವರಿಗೆ ಆರೈಕೆ ಮಾಡಲಾಗುತ್ತದೆ.



ಭಾನುವಾರ ಅಂ.ರಾ. ವಸ್ತುಪ್ರದರ್ಶನ ಕೇಂದ್ರಕ್ಕೆ ಭೇಟಿ ನೀಡಿದ್ದ ವಿಶ್ವನಾಥ್, ಅನಿಲ್‌ಕುಮಾರ್.

## ಬಿಐಇಸಿ ಎಷ್ಟು ದೊಡ್ಡದು?

| | |
|---|---|
| ಒಟ್ಟು ವಿಸ್ತೀರ್ಣ | 77,200 ಚ.ಮೀ |
| ಇರುವ ಸಭಾಂಗಣ ಸಂಖ್ಯೆ | 5 |
| ಸಭಾಂಗಣ-1 | 10,531 ಚ.ಮೀ |
| ಸಭಾಂಗಣ-2 | 10,571 ಚ.ಮೀ |
| ಸಭಾಂಗಣ-3 | 21,099 ಚ.ಮೀ |
| ಸಭಾಂಗಣ-4 | 17,625 ಚ.ಮೀ |
| ಸಭಾಂಗಣ-5 | 17,625 ಚ.ಮೀ |

## ಬಿಐಇಸಿಯಲ್ಲಿ 100 ಐಸಿಯು

ಬಿಐಇಸಿ ಆರೈಕೆ ಕೇಂದ್ರದಲ್ಲಿ 100 ತೀವ್ರ ನಿಗಾ ಘಟಕ ವ್ಯವಸ್ಥೆ ಮಾಡಲಾಗುವುದು, ಇಲ್ಲಿ ಆಮ್ಲಜನಕ ವ್ಯವಸ್ಥೆ ಸೇರಿ ಅತ್ಯಾಧುನಿಕ ಸೌಲಭ್ಯಗಳು ಇರುತ್ತವೆ. ನಗರದ ಎಲ್ಲ ಆರೈಕೆ ಕೇಂದ್ರದಲ್ಲಿ ಹಾಸಿಗೆ ಭರ್ತಿ ಬಳಿಕ ವಸ್ತು ಪ್ರದರ್ಶನ ಕೇಂದ್ರಕ್ಕೆ ಸೋಂಕಿತರುನ್ನು ರವಾನಿಸಲಾಗುವುದು. ಸೋಮವಾರದ ವೇಳೆಗೆ ಏಳು ಸಾವಿರ ಹಾಸಿಗೆ ಸಿದ್ಧವಾಗಲಿವೆ. ಉಳಿದ 3 ಸಾವಿರ ಹಾಸಿಗೆ ಮೂರ್ನಾಲ್ಕು ದಿನಗಳಲ್ಲಿ ಸಿದ್ಧವಾಗಲಿವೆ ಎಂದು ಸಂಜೆ ಭೇಟಿ ನೀಡಿದ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ ತಿಳಿಸಿದರು.